# ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (RWBCIS) ರಬಿ 2022-23

ಸುರಕ್ಷಿತ ಕೃಷಿಕರು, ದೇಶದ ಹೆಮ್ಮೆ

HDFC ERGO

## ತೋಟಗಾರಿಕೆ ಇಲಾಖೆ, ಕರ್ನಾಟಕ ಸರ್ಕಾರ ಮತ್ತು ಭಾರತ ಸರ್ಕಾರದ ಸಹಯೋಗದಿಂದ ಜಾರಿಗೊಳಿಸಲಾಗಿರುತ್ತದೆ.

ಸ್ವಾತಂತ್ರ್ಯದ ಅಮೃತ ಮಹೋತ್ಸವ

**ಮರುವಿನ್ಯಾಸಗೊಳಿಸಲಾದ ಹವಾಮಾನ ಆಧಾರಿತ ಬೆಳೆ ವಿಮೆ ಯೋಜನೆ (RWBCIS)** ಅಡಿ ನೋಂದಣಿ ಮಾಡಿಸಿರುವ ಕೃಷಿಕರಿಗೆ ಮಳೆ, ತಾಪಮಾನ, ಗಾಳಿ, ಆದ್ರತೆ ಮುಂತಾದ ಪ್ರತಿಕೂಲ ವಾತಾವರಣದಿಂದ ಉಂಟಾಗುವ ಸಂಭವನೀಯ ಬೆಳೆ ನಷ್ಟಗಳ ಕಾರಣದಿಂದಾಗುವ ಹಣಕಾಸಿನ ನಷ್ಟಗಳ ಸಂಭಾವ್ಯತೆಯ ಕಷ್ಟವನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದೆ.



ಡಬ್ಲ್ಯುಬಿಸಿಐಎಸ್ ಯೋಜನೆಯಡಿ ಬೆಲೆ ನಷ್ಟವನ್ನು ಅಂದಾಜಿಸಲು ಹವಾಮಾನ ಸೂಚ್ಯಂಕಗಳನ್ನು ಪ್ರಾಕ್ಸಿಯಾಗಿ ಉಪಯೋಗಿಸ-ಲಾಗುತ್ತದೆ. ಹವಾಮಾನ ಸೂಚ್ಯಂಕಗಳನ್ನು ಬಳಸಿಕೊಂಡು ಸಂಭವನೀಯ ಬೆಳೆ ನಷ್ಟವನ್ನು ಅಂದಾಜಿಸಲು ಬೆಳೆವಾರು ಟರ್ಮ್‌ಶೀಟ್ಗಳನ್ನೂ ರಚಿಸಲಾಗಿರುತ್ತದೆ.

ಈ ರೀತಿಯಲ್ಲಿ ಈ ಯೋಜನೆಯು ಕೃಷಿಕರಿಗೆ ಆರ್ಥಿಕ ಸ್ಥಿರತೆಯನ್ನು ಒದಗಿಸುತ್ತದೆ ಹಾಗು ಆವಿಷ್ಕಾರಿ ಹಾಗು ಆಧುನಿಕ ಕೃಷಿ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲು ಅವರಿಗೆ ಪ್ರೋತ್ಸಾಹ ನೀಡುವ ಮೂಲಕ ಕೃಷಿಯಲ್ಲಿ ನಿರಂತರತೆಯನ್ನು ಖಚಿತಪಡಿಸುತ್ತದೆ.

## ಈ ಯೋಜನೆಯಿಂದ ಯಾರು ಪ್ರಯೋಜನ ಪಡೆಯಬಹುದು:

ಯೋಜನೆಯಡಿ ವಿವಿಧ ವಿಮಾ ಘಟಕಗಳಲ್ಲಿ ಅಧಿಸೂಚಿಸಲಾದ ಬೆಳೆಗಳಿಗೆ ಇಚ್ಛೆಯುಳ್ಳ ಬೆಳೆ ಸಾಲ ಪಡೆದ ಮತ್ತು ಬೆಳೆ ಸಾಲ ಪಡೆಯದ ರೈತರು ಭಾಗವಹಿಸಬಹುದು. ಬೆಳೆ ಸಾಲ ಪಡೆಯದ ರೈತರು ನಿಗದಿತ ಅರ್ಜಿಯೊಂದಿಗೆ ಪ್ರಸಕ್ತ ಸಾಲಿನ ಭೂಮಿ ಹೊಂದಿರುವುದರ ದಾಖಲೆಗಳಾದ ಪಹಣಿ ಪ್ರತಿ, ಬ್ಯಾಂಕ್ ಖಾತೆ ಪಾಸ್ ಪುಸ್ತಕದ ಪ್ರತಿ, ಆಧಾರ್ ಕಾರ್ಡ್ ನ ಪ್ರತಿ ಮತ್ತು ಸ್ವಯಂಘೋಷಿತ (ಸ್ವಯಂ ಘೋಷಿತ) ಬೆಳೆ ವಿವರ ಸಲ್ಲಿಸುವುದು.

ಯೋಜನೆಯ ಮಾರ್ಗಸೂಚಿಯನ್ವಯ ಬ್ಯಾಂಕಿನಲ್ಲಿ ಸಾಲ ಮಂಜೂರಾದ ಎಲ್ಲಾ ರೈತರನ್ನು ಈ ಯೋಜನೆಯಡಿಯಲ್ಲಿ ಒಳಪಡಿಸಲಾಗುವುದು. ಬೆಳೆ ಸಾಲ ಪಡೆದ ರೈತರು ಯೋಜನೆಯಲ್ಲಿ ಭಾಗವಹಿಸಲು ಇಚ್ಛಿಸದೇ ಇದ್ದಲ್ಲಿ ಸಂಬಂಧಿಸಿದ ಬ್ಯಾಂಕ್ ಶಾಖೆಯ ವ್ಯವಸ್ಥಾಪಕರಿಗೆ ನೋಂದಣಿಯ ಅಂತಿಮ ದಿನಾಂಕಕ್ಕಿಂತ ಏಳು ದಿನಗಳು ಮುಂಚಿತವಾಗಿ ಲಿಖಿತವಾಗಿ ಮುಚ್ಚಳಿಕೆ ಪತ್ರವನ್ನು ನೀಡಿದಲ್ಲಿ ಅಂತಹ ರೈತರನ್ನು ಯೋಜನೆಯಿಂದ ಕೈಬಿಡಲು ಅವಕಾಶವಿರುತ್ತದೆ. ಸಂಬಂಧಿಸಿದ ಬ್ಯಾಂಕ್ ಗಳು ಈ ರೀತಿ ಸ್ವೀಕರಿಸಲಾದ ಮುಚ್ಚಳಿಕೆ ಪತ್ರಗಳನ್ನು ದಾಖಲೆಗಳೊಂದಿಗೆ ವ್ಯವಸ್ಥಿತವಾಗಿ ನಿರ್ವಹಿಸಬೇಕಾಗಿರುತ್ತದೆ.

## ಹವಾಮಾನದ ಈ ಸೂಚ್ಯಂಕಗಳು ಒಳಗೊಂಡಿರುತ್ತವೆ:

ಯೋಜನೆಯ ಅಡಿಯಲ್ಲಿ ಬೆಳೆಯ ನಷ್ಟಗಳಿಗೆ ಕಾರಣವಾಗುವ ಈ ಕೆಳಗಿನ ಹವಾಮಾನದ ಸೂಚ್ಯಂಕಗಳು ಒಳಗೊಂಡಿರುತ್ತವೆ:

- ಮಳೆಯ ಕೊರತೆ, ಅತಿವೃಷ್ಟಿ, ಒಣಹವೆ, ಬರಗಾಲ
- ಆದ್ರತೆ
- ತಾಪಮಾನಅಧಿಕ ತಾಪಮಾನ

- ಮೇಲಿನ ಎ ದಿಂದ ಡಿ ವರೆಗಿನ ಸೂಚ್ಯಂಕಗಳ ಸಂಯೋಜನೆಗಳು
- ಗಾಳಿಯ ವೇಗ

## ಸ್ಕೀಮ್ ನ ಲಾಭ ಪಡೆಯಲು ಕೃಷಿಕರಿಂದ ಕಡ್ಡಾಯವಾಗಿ ಬೇಕಾದ ದಸ್ತಾವೇಜುಗಳು:

- ಆಧಾರ್ ಕಾರ್ಡ್ ನ ಪ್ರತಿ
- ಸರಿಯಾಗಿ ತುಂಬಿಸಲಾದ ಪ್ರಸ್ತಾವ ಫಾರ್ಮ್ ನ ಪ್ರತಿ
- ಇತ್ತೀಚಿಗಿನ ಜಮೀನಿನ ದಾಖಲೆ /7/12/ಹಕ್ಕುಗಳ ರಾಜ್ಯ ದಾಖಲೆ (ಆರ್ ಟಿ ಸಿ) / ಜಮೀನಿನ ಸ್ವಾಧೀನತೆಯ
- ಪ್ರಮಾಣಪತ್ರ (ಎಲ್ ಪಿ ಸಿ ) / ಖಸಾರಾ ಇತ್ಯಾದಿಗಳ ಪ್ರತಿ
- ಅನ್ವಯವಾಗುವ ಒಪ್ಪಂದ / ಟೆನೆಂಟ್ ಕೃಷಿಕರ ಒಪ್ಪಂದಕ್ಕಾಗಿ ಅಫಿದಾವಿತ್
- ಐಎಫ್ ಎಸ್ ಸಿ ನಂಬರ್ ಮತ್ತು ಬ್ಯಾಂಕ್ ಖಾತೆ ನಂಬರ್ ಹೊಂದಿರುವ ಬ್ಯಾಂಕ್ ಪಾಸ್ ಪುಸ್ತಕದ ಪ್ರತಿ ಅಥವಾ ಕ್ಯಾನ್ಸಿಲ್ಡ್ ಚೆಕ್
- ಬೀಜಬಿತ್ತನೆಗಾಗಿ ಸ್ವಯಘೋಷಣೆ

## ಕ್ಲೇಮ್ ಗಳ ಮೌಲ್ಯ ಮಾಪನ ಇತ್ಯರ್ಥ :

ಸೂಚಿತ ರೆಫರೆನ್ಸ್ ವೆದರ್ ಸ್ಟೇಷನ್ ನಿಂದ ದಾಖಲಿಸಲಾದ ಹವಾಮಾನದ ಡೇಟಾದ ಆಧಾರದ ಮೇಲೆ ಮಾತ್ರ ಕ್ಲೇಮ್ ಗಳನ್ನು ಮೌಲ್ಯ ಮಾಪನ ಮಾಡಲಾಗುತ್ತದೆ ಹಾಗೂ ಪೂರ್ಣ ಪಾಲಿಸಿ ಅವಧಿಗಾಗಿ ಪ್ರಮಾಣೀಕೃತ ಹವಾಮಾನ ಡೇಟಾವನ್ನು ಸ್ವೀಕರಿಸಿದ ನಂತರ ಹಾಗೂ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಸಬ್ಸಿಡಿ ಸ್ವೀಕೃತಿಯ ನಂತರ ಕ್ಲೇಮ್ ಗಳ ಪ್ರಕ್ರಿಯೆಗಳು ಪ್ರಾರಂಭವಾಗುತ್ತದೆ.

## ಬೆಳೆಯ ಪ್ರೀಮಿಯಮ್ ಮತ್ತು ಅಂತಿಮ ದಿನಾಂಕದ ಕೋಷ್ಟಕ

| ಜಿಲ್ಲೆಯ ಹೆಸರು | ನೀರಾವರಿಯ ಸ್ಥಿತಿ (ಐಆರ್/ಆರ್ಎಫ್) | ಬೆಳೆಯ ಹೆಸರು | ವಿಮೆಯ ಮೊತ್ತ (ರೂ./ಹೆ) | ಪ್ರೀಮಿಯಮ್ ದರ ರೈತರ ಪಾಲು (%) | ರೈತರ ಪಾಲು (ರೂ./ಹೆ) | ರೈತರ ಖಾತೆಯಿಂದ ಪ್ರೀಮಿಯಮ್ ಡೆಬಿಟ್ ಮಾಡಲು ಕೊನೆಯ ದಿನಾಂಕ |
|---|---|---|---|---|---|---|
| ಹಾವೇರಿ | ಎನ್ ಎಸ್ | ಮಾವು | 80000 | 5% | 4000 | 15-11-2022 |

## ನೌಕರರ ವಿವರಗಳು

| ಜಿಲ್ಲೆ/ರಾಜ್ಯ | ಹುದ್ದೆ | ಮುಖ್ಯಸ್ಥರು | ಈ-ಮೇಲ್ ವಿಳಾಸ | ದೂರವಾಣಿ |
|---|---|---|---|---|
| ಹಾವೇರಿ | ನೋಡಲ್ ಅಧಿಕಾರಿ | ಅಮರನಾಥ್ ಟಿ | Amarnadh.T@hdfcergo.com | 8431572445 |
| ಹಾವೇರಿ | ಜಿಲ್ಲಾ ಸಮನ್ವಯಕಾರರು | ಬಸವರಾಜ್ | Basavaraj.Hiremath1@hdfcergo.com | 8150079660 |

**ಯೋಜನೆಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಪಡೆಯಲು, ದಯವಿಟ್ಟು ಕರೆ ಮಾಡಿ : ಶುಲ್ಕ ರಹಿತ ಸಂ.:**

**1800 266 0700**

ಸಾಲ-ಪಡೆಯದ ಕೃಷಿಕರು ಅತಿ ಹತ್ತಿರದ ವಿಮಾ ಸಂಸ್ಥೆಗಳು, ಅಂದರೆ, ರಾಷ್ಟ್ರೀಕೃತ ಬ್ಯಾಂಕ್, ಸಹಕಾರಿ ಬ್ಯಾಂಕ್, ಪ್ರಾಥಮಿಕ ಕೃಷಿ ಸಹಕಾರ ಸಂಸ್ಥೆ (ಪಿಎಸಿಎಸ್), ಕ್ಷೇತ್ರೀಯ ಗ್ರಾಮೀಣ ಬ್ಯಾಂಕ್‌ಗಳು/ವಿಮಾ ಮಧ್ಯವರ್ತಿ/ಸಾಮಾನ್ಯ ಸೇವಾ ಕೇಂದ್ರ (ಸಿಎಸ್‌ಸಿ) ಇದರ ಮೂಲಕ ಸ್ವತ: ದಾಖಲುಗೊಳ್ಳುವುದು ಇವುಗಳ ಮೂಲಕ ತಮ್ಮ ಬೆಳೆ ವಿಮೆ ಮಾಡಿಕೊಳ್ಳಬಹುದು.



ಎಚ್‌ಡಿಎಫ್‌ಸಿ ಎರ್ಗೋ ಜನರಲ್ ಇನ್‌ಶೂರೆನ್ಸ್ ಕಂಪೆನಿ ಲಿಮಿಟೆಡ್. ಐಆರ್‌ಡಿಎಐ ರಿಜಿ. ನಂ. 146. CIN: U66030MH2007PLC177117. ರಿಜಿಸ್ಟರ್ಡ್ ಮತ್ತು ಕಾರ್ಪೊರೇಟ್ ಕಛೇರಿ: 1ನೇ ಮಹಡಿ, ಎಚ್‌ಡಿಎಫ್‌ಸಿ ಹೌಸ್, 165–166 ಬ್ಯಾಕ್‌ಬೇ ರಿಕ್ಲಮೇಶನ್, ಎಚ್. ಟಿ. ಪಾರೆಖ್ ಮಾರ್ಗ, ಚರ್ಚ್‌ಗೇಟ್, ಮುಂಬಯಿ –400020. ಅಪಾಯದ ಅಂಶಗಳು, ನಿಯಮ ಮತ್ತು ನಿಬಂಧನೆಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಮಾರಾಟವನ್ನು ಅಂತಿಮಗೊಳಿಸುವ ಮೊದಲು ದಯವಿಟ್ಟು ಮಾರಾಟ ಬ್ರೋಷರ್/ಪ್ರಾಸ್ಪೆಕ್ಟಸ್‌ನ್ನು ಓದಿರಿ. ಈ ಮೇಲೆ ತೋರಿಸಲಾದ ಟ್ರೇಡ್ ಲೋಗೊ ಎಚ್‌ಡಿಎಫ್‌ಸಿ ಲಿ. ಮತ್ತು ಎರ್ಗೋ ಇಂಟರ್‌ನ್ಯಾಶನಲ್ ಎಜಿಗೆ ಸೇರಿದೆ ಮತ್ತು ಲೈಸನ್ಸ್‌ನಡಿಯಲ್ಲಿ ಕಂಪೆನಿಯಿಂದ ಉಪಯೋಗಿಸಲ್ಪಡುತ್ತಿದೆ. UIN:CSC-Restructured Weather Based Crop Insurance Scheme - HDE-AG-P18-26-V01-17-18 | Restructured Weather based Crop Insurance Scheme - IRDAN125P0005V01201617. UID: 11328.